ಆರೋಗ್ಯ ಕವಚ ಯೋಜನೆಯಡಿಯಲ್ಲಿ ಆಂಬುಲೆನ್ಸ್ ವಾಹನ ಪೂರೈಸುವ ಬಗ್ಗೆ.

6 (130) ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ)
ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆರೋಗ್ಯ ಕವಚ ಯೋಜನೆಯನ್ನು ಯಾವಾಗ ಜಾರಿಗೆ ತರಲಾಯಿತು. ಇದರ ರೂಪುರೇಷೆಗಳೇನು;

ಆರೋಗ್ಯ ಕವಚ ಯೋಜನೆಯನ್ನು 1-11-2008 ರಿಂದ ಜಾರಿಗೆ ತರಲಾಗಿದೆ.

ಯಾವುದೇ ತುರ್ತು ಕರೆಯನ್ನು ಮೊಬೈಲ್ ಅಥವಾ ನೇರ ದೂರವಾಣಿ ಮೂಲಕ ಸಂಖ್ಯೆ 108ಕ್ಕೆ ಮಾಡಿದಲ್ಲಿ ಅದು ಅಪಘಾತ, ಹಾವು ಕಡಿತ, ಗರ್ಭಿಣಿ ಪ್ರಕರಣಗಳು ಇತ್ಯಾದಿ ವೈದ್ಯಕೀಯಕ್ಕೆ ಸಂಬಂಧಿಸಿದವೂ ಅಲ್ಲದೆ ಪೊಲೀಸ್ ಮತ್ತು ಅಗ್ನಿ ಶಾಮಕಕ್ಕೆ ಸಂಬಂಧಿಸಿದ ಯಾವುದೇ ಕರೆ ಇದ್ದರೂ ಸ್ವೀಕರಿಸಿದ ಕೇಂದ್ರದಲ್ಲಿನ ತುರ್ತುಸ್ಥಿತಿ ನಿರ್ವಹಿಸುವ ತಂಡವು ಆ ಕರೆಯ ಬಗ್ಗೆ ತಕ್ಷಣ ಕಾರ್ಯಪ್ರಮುಖವಾಗುತ್ತದೆ. ಸದರಿ ಕೇಂದ್ರವು ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಇತರೆ ಆಧುನಿಕ ಉಪಕರಣಗಳನ್ನೊಳಗೊಂಡ ಆಂಬುಲೆನ್ಸ್‌ನ್ನು ಘಟನೆಯ ಸ್ಥಳಕ್ಕೆ ವಿಳಂಬವಿಲ್ಲದೆ ಕಳುಹಿಸಲು ಏರ್ಪಾಡು ಮಾಡುತ್ತದೆ. ಆ ಘಟನೆಯ ಸ್ಥಳದಲ್ಲಿ ತುರ್ತು ಚಿಕಿತ್ಸೆಯನ್ನು ನೀಡುವ ಮೂಲಕ ರೋಗಿಯ ಆರೋಗ್ಯವನ್ನು ಸುಧಾರಿಸಿ, ತಕ್ಷಣ ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡಲಾಗುತ್ತದೆ.

ಆ) ನಂಜುಂಡಪ್ಪ ವರದಿಯ ಪ್ರಕಾರ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು ಅತೀ ಹಿಂದುಳಿದ ಪ್ರದೇಶವಾಗಿದ್ದರೂ ಸಹಾ, ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆರೋಗ್ಯ ಕವಚ ಯೋಜನೆಯಡಿ "108" ಮಾದರಿ ಆಂಬುಲೆನ್ಸ್‌ನ್ನು ಪೂರೈಸದೆ ಇರಲು ಕಾರಣವೇನು;

2001ರ ಜನಗಣತಿ ಪ್ರಕಾರ ಕರ್ನಾಟಕದ ಜನಸಂಖ್ಯೆಯು 5.29 ಕೋಟಿಗಳಾಗಿದೆ. ಸರಾಸರಿ 1.10 ಲಕ್ಷ ಜನಸಂಖ್ಯೆಗೆ ಒಂದು ಆಂಬುಲೇನ್ಸ್ ಪ್ರಕಾರ ಒಟ್ಟು 517 ಆಂಬುಲೆನ್ಸ್‌ಗಳನ್ನು ರಾಜ್ಯಾದ್ಯಂತ ಮಾರ್ಚ್-2010 ರ ವೇಳೆಗೆ ಒದಗಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ. ಅದರಂತೆ, ಇದುವರೆವಿಗೂ ರಾಜ್ಯಾದ್ಯಂತ ಒಟ್ಟು 208 ಆಂಬುಲೆನ್ಸ್ ಸೇವೆಗಳನ್ನು ಒದಗಿಸಲಾಗಿದೆ. ರಾಮನಗರ ಜೆಲ್ಲೆಯ ಮಾಗಡಿ ತಾಲ್ಲೂಕಿಗೆ ಒಂದು ಆಂಬುಲೆನ್ಸ್‌ನ್ನು ಒದಗಿಸಲಾಗಿದೆ.

ಇ) ಹಾಗಿದ್ದಲ್ಲಿ, ಇನ್ನು ಎಷ್ಟು ದಿನಗಳಲ್ಲಿ ಮಾಗಡಿ ವಿಧಾನ ಸಭಾ ಕ್ಷೇತ್ರಕ್ಕೆ ಹೋಬಳಿಗೆ ಒಂದರಂತೆ ಆಂಬುಲೆನ್ಸ್ ಸೌಲಭ್ಯ ಒದಗಿಸಿ ಕೊಡಲಾಗುವುದು.

ಸರಾಸರಿ 1.10 ಲಕ್ಷ ಜನಸಂಖ್ಯೆಗೆ 1 ಆಂಬುಲೆನ್ಸ್‌ನ್ನು ಒದಗಿಸಲು ಈ ಯೋಜನೆಯಡಿ ಕಲ್ಪಿಸಲಾಗಿರುವ ಕಾರಣ ಪ್ರತಿ ಹೋಬಳಿಗೆ 1 ಆಂಬುಲೆನ್ಸ್‌ರಂತೆ ಒದಗಿಸುವುದು ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್.ಪಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಸರ್ಕಾರ ಆರೋಗ್ಯ ಕವಚ ಯೋಜನೆಯಡಿಯಲ್ಲಿ ಆಂಬುಲೆನ್ಸ್‌ಗಳನ್ನು ಕೊಡುವಂಥ ಕಾರ್ಯಕ್ರಮವನ್ನು ಏನು ಹಮ್ಮಿಕೊಂಡಿದೆ, ಅದನ್ನು 1.10 ಲಕ್ಷ ಜನಸಂಖ್ಯೆಗೆ ಅನುಗುಣವಾಗಿ ಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ರಾಜ್ಯಾದ್ಯಂತ 517 ಆಂಬುಲೆನ್ಸ್‌ಗಳನ್ನು ಕೊಡಬೇಕಾಗುತ್ತದೆ. ಅದರಲ್ಲಿ 208 ಆಂಬುಲೆನ್ಸ್‌ಗಳನ್ನು ಮಾತ್ರ ಒದಗಿಸಿಕೊಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಈಗ ಒದಗಿಸಿರುವ ಈ 208 ಆಂಬುಲೆನ್ಸ್‌ಗಳನ್ನು ಯಾವ ಮಾನದಂಡದ ಮೇಲೆ ಕೊಟ್ಟಿದ್ದೀರಿ? ಇದನ್ನು ಕೊಡುವುದಕ್ಕೆ ಮಾನದಂಡ ಏನು? ಅದರ ಆಧಾರ ಏನು? ಎಂಬುದನ್ನು ಹೇಳಬೇಕಾಗುತ್ತದೆ. ಇನ್ನು ಬಾಕಿ ಇರುವಂಥ ಆಂಬುಲೆನ್ಸ್‌ಗಳನ್ನು ಮಾರ್ಚ್ 2010ರ ವೇಳೆಗೆ ಕೊಡುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಇದನ್ನು ಅದಷ್ಟು ಬೇಗನೆ ಪೂರೈಸಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಇನ್ನು ಇದರ ವ್ಯಾಪ್ತಿ ಬರೀ 30 ಕಿ.ಮೀ. ಅಷ್ಟೆ ಇದೆ. ಇದು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗಳ ಹತ್ತಿರ ಮಾತ್ರ ಹೋಗುವುದಕ್ಕೆ ಸೀಮಿತವಾಗುತ್ತದೆ. ಜಿಲ್ಲಾ ಕ್ವಾರ್ಟರ್ಸ್‌ಗಳಿಗೆ ತ್ವರಿತವಾಗಿ ಹೋಗಬೇಕೆಂದರೆ ಅದರ ವ್ಯವಸ್ಥೆಗೆ ಸರ್ಕಾರ ಏನು ಮಾಡುತ್ತದೆ? ಇದರ ಬಗ್ಗೆ ದಯಮಾಡಿ ತಿಳಿಸಬೇಕು. ಇದರ ಜೊತೆಯಲ್ಲಿ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಹಳೆಯ ಆಂಬುಲೆನ್ಸ್‌ಗಳು ಇವೆ. ಅವುಗಳನ್ನು ಬದಲಾವಣೆ ಮಾಡಿ ಹೊಸ ಆಂಬುಲೆನ್ಸ್‌ಗಳನ್ನು ಏನಾದರೂ ಕೊಡುತ್ತೀರಾ? ಇವು ಎಲ್ಲಾ ಕೆಟ್ಟು ಹೋಗಿವೆ, ಇದರ ಜೊತೆಗೆ ಡ್ರೈವರ್‌ಗಳು ಇಲ್ಲ, ಇದನ್ನು ಸರಿಪಡಿಸುವಂಥ ಕೆಲಸವನ್ನು ಮಾಡುತ್ತಿರಾ? ಈ ವಿಚಾರವಾಗಿ ದಯಮಾಡಿ ಸರ್ಕಾರ ತಿಳಿಸಬೇಕೆಂದು ತಮ್ಮ ಮೂಲಕ ಹೇಳಲಿಚ್ಛಿಸುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಆರೋಗ್ಯ ಕವಚ ಯೋಜನೆಯನ್ನು ದಿನಾಂಕ:01.11.2008ರಂದು ಪ್ರಾರಂಭ ಮಾಡಿದ್ದೇವೆ. ಇದನ್ನು ಒಟ್ಟಾರೆ 1.10 ಲಕ್ಷ ಜನಸಂಖ್ಯೆ ಆಧಾರದ ಮೇಲೆ ಒಂದು ಆಂಬುಲೆನ್ಸ್ ಅನ್ನು ಕೊಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈಗ ರಾಜ್ಯದಲ್ಲಿ 208 ಆಂಬುಲೆನ್ಸ್‌ಗಳು ಕೆಲಸ ಮಾಡುತ್ತಿವೆ. ಬಹಳಷ್ಟು ಜನರಿಗೆ ಹಾವು, ಚೇಲು, ಕಡಿದಂಥ ಸಂದರ್ಭದಲ್ಲಿ, ಗರ್ಭಿಣಿಯರ ಹೆರಿಗೆ ಸಂದರ್ಭದಲ್ಲಿ ಈ ಆಂಬುಲೆನ್ಸ್‌ಗಳು ಉಪಯೋಗವಾಗುತ್ತಿವೆ. ತಮ್ಮ ಮಾಗಡಿ ಕ್ಷೇತ್ರಕ್ಕೂ ಮೊನ್ನೆ ಒಂದು ಅಂಬುಲೆನ್ಸ್ ಅನ್ನು ಕೊಟ್ಟಿದ್ದೇವೆ.

ಶ್ರೀ ಹೆಚ್.ಪಿ.ಬಾಲಕೃಷ್ಣ : ನಾನು ಇದರ ಮಾನದಂಡ ಏನು? ಎಂದು ಕೇಳುತ್ತಿದ್ದೇನೆ. ನೀವು 208 ಆಂಬುಲೆನ್ಸ್‌ಗಳನ್ನು ಏನು ಕೊಟ್ಟಿದ್ದೀರಿ. ಇದರ ಮಾನದಂಡ ಏನು?

ಶ್ರೀ ಬಿ. ಶ್ರೀರಾಮುಲು : 1.10 ಲಕ್ಷ ಜನಸಂಖ್ಯೆ ಇರುವಂಥಾದ್ದಕ್ಕೆ ಒಂದು ಆಂಬುಲೆನ್ಸ್ ಒದಗಿಸಿದ್ದೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಯಿತು, ಅದು ಸರಿ. ಈ 208 ಆಂಬುಲೆನ್ಸ್‌ಗಳನ್ನು ಪ್ರಥಮ ಆದ್ಯತೆಯಲ್ಲಿ ಯಾವ ಆಧಾರದ ಮೇಲೆ ಮೊದಲು ಕೊಟ್ಟಿದ್ದೀರೆಂಬುದನ್ನು ತಿಳಿಸಬೇಕಾಗುತ್ತದೆ. ಈಗ ತಾವು ನಮ್ಮ ತಾಲ್ಲೂಕಿಗೆ ಒಂದು ಆಂಬುಲೆನ್ಸ್ ಅನ್ನು ಕೊಟ್ಟಿದ್ದೀರಿ, ಅದು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಇರಬೇಕಾಗುತ್ತದೆ. ಇದು ಅಲ್ಲಿ ಇಲ್ಲ, ಅದು ಹೋಬಳಿ ಹೆಡ್ ಕ್ವಾರ್ಟರ್ಸ್‌ನಲ್ಲಿದೆ. ಅದು ಅಕ್ಸಿಡೆಂಡ್ ಜೋನ್ ಎಂದು ತಾವು ಕೊಟ್ಟಿದ್ದೀರಿ, ಅದರ ಬಗ್ಗೆ ನಮ್ಮ ಚರ್ಚೆ ಇಲ್ಲ. ಅದರೆ ಇದು ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಇರಬೇಕಲ್ಲಾ. ಅದಕ್ಕೆ ಇದರ ಬಗ್ಗೆ ನಿಮ್ಮ ಮಾನದಂಡ ಏನು? ಯಾವ ರೀತಿ ಕೊಡುತ್ತೀರಿ? ಯಾವಾಗ ಪೂರೈಸುತ್ತೀರಿ? ದಯಮಾಡಿ ತೀಳಿಸಬೇಕು.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ರಾಮನಗರ ಜಿಲ್ಲೆಗೆ ಸುಮಾರು ಸುಮಾರು 4 ಆರೋಗ್ಯ ಕವಚ 108 ಮಾದರಿ ಕೊಟ್ಟಿದ್ದೇವೆ. ಈಗ ಮಾನ್ಯ ಸದಸ್ಯರು ತಾಲ್ಲೂಕು ಹೆಡ್ ಕಾರ್ಟಸ್‌ಗಳಲ್ಲಿ ಕಡ್ಡಾಯವಾಗಿ ಇರಬೇಕೆಂದು ಏನು ಕೇಳಿದ್ದಾರೆ. ಇದರ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ, ಅಲ್ಲಿ ಆಂಬುಲೆನ್ಸ್ ಅನ್ನು ನಿಲ್ಲಿಸುವುದಕ್ಕೆ ಏನು ವ್ಯವಸ್ಥೆ ಮಾಡಬೇಕಾಗುತ್ತದೆಂಬುದನ್ನು ನೋಡಿಕೊಂಡು, ಅಲ್ಲಿ ಉಳಿಯುವುದಕ್ಕೆ ವ್ಯವಸ್ಥೆ ಇರುವುದನ್ನು ನೋಡಿಕೊಂಡು ಅಲ್ಲೆ ಆಂಬುಲೆನ್ಸ್ ಇರುವಂತೆ ವ್ಯವಸ್ಥೆಯನ್ನು ನಾನು ಮಾಡಿಕೊಡುತ್ತೇನೆ. ನಾವು ಅದಕ್ಕೆ ಮೊದಲೇ 30 ಕಿ.ಮೀ., 35 ಕಿ.ಮೀ. ಗೆ ಎಂದು ಪಿಕ್ಸ್ ಮಾಡಿರುತ್ತೇವೆ. ಈ ವಾಹನಗಳು ಇಷ್ಟು ಕಿ.ಮೀ.ಗಳಷ್ಟೆ ತಿರುಗಾಡಬೇಕು, ಹೆಚ್ಚು ದೂರ ಹೋಗುವ ಹಾಗೆ ಇಲ್ಲ. ಇದಕ್ಕೆ ಕಾರಣ ಏನೆಂದರೆ ಬಹಳಷ್ಟು ಜನರು ಗ್ರಾಮೀಣಾ ಪ್ರದೇಶದಲ್ಲಿ ಒಂದೊಂದು ಸಮಯದಲ್ಲಿ 100ಕಿ.ಮೀ, 200 ಕಿ.ಮೀ, 300 ಕಿ.ಮೀ. ದೂರ ಬೆಂಗಳೂರಿಗೆ ಬರಬೇಕೆಂದು ಕೇಳುತ್ತಾರೆ. ನಾವು MOU ಮಾಡಿಕೊಳ್ಳುವ ಸಂದರ್ಭದಲ್ಲಿ 30 ಕಿ.ಮೀ., 35 ಕಿ.ಮೀ. ದೂರ ಚಲಿಸಬೇಕೆಂದು ಮಾಡಿಕೊಂಡಿದ್ದೇವೆ. ಇದು ಇದಕ್ಕಿಂತ ಹೆಚ್ಚು ದೂರ ಹೋಗಲು ಆಗದ ಕಾರಣ ಉತ್ತರವನ್ನು ನೀಡಿದ್ದೇವೆ. ಅದರ ಬಗ್ಗೆ ಸೂಕ್ತವಾಗಿ ಯಾವ ರೀತಿ ಮಾಡಬೇಕೆಂಬುದನ್ನು ನೋಡಿ ನಾನು ಮಾಡಿಕೊಡುತ್ತೇನೆಂದು ಹೇಳುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಈಗ ಹಳೆಯ ಆಂಬುಲೆನ್ಸ್‌ಗಳು ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಇವೆ. ಅದನ್ನು replace ಮಾಡಿ ಹೊಸ ಆಂಬುಲೆನ್ಸ್‌ಗಳನ್ನು ಕೊಡುತ್ತಿರಾ? ಹಳೆಯ ಆಂಬುಲೆನ್ಸ್‌ಗಳು ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಇವೆ. ಇವು ಜಿಲ್ಲಾ ಹೆಡ್ ಕ್ವಾರ್ಟರ್‌ಗಳಿಗೆ ಬರಬೇಕಾದರೆ ಈ ಆಂಬುಲೆನ್ಸ್‌ಗಳು ಬರುವುದಿಲ್ಲ. ನೀವು ಅದನ್ನು ಏನಾದರೂ ಸರಿ ಮಾಡಿ ಕೊಡುತ್ತಿರಾ? ಅಥವಾ

ಹೊಸ ಆಂಬುಲೆನ್ಸಗಳನ್ನು ಕೊಡುತ್ತಿರಾ? ಅದಕ್ಕೆ ಡ್ರೈವರ್‌ಗಳ ವ್ಯವಸ್ಥೆಯನ್ನು ಮಾಡಿ ಕೊಡುತ್ತಿರಾ? ದಯಮಾಡಿ ತಿಳಿಸಬೇಕು.

ಶ್ರೀ ಬಿ. ಶ್ರೀರಾಮುಲು : ಹಳೆಯ ಆಂಬುಲೆನ್ಸ್‌ಗಳು ರಿಪೇರಿ ಮಾಡುವ ವಿಚಾರವಾಗಿ ಅದನ್ನು ಯಾವ ರೀತಿಯಲ್ಲಿ ಪರಿಶೀಲನೆ ಮಾಡಬೇಕೋ ನೋಡಿ ಅದನ್ನು ಪರಿಶೀಲನೆ ಮಾಡಿ ಕೊಡುತ್ತೇನೆ.

ಶ್ರೀ ಆರ್.ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರಬಯಸುವುದೆನೆಂದರೆ ಇದು ಒಂದು ಒಳ್ಳೆಯ ಸ್ಕೀಮ್ ಆಗಿದೆ. ಇವರು ಆರೋಗ್ಯ ಕವಚ ಯೋಜನೆಯಡಿ 108 ಮಾದರಿ ಆಂಬುಲೆನ್ಸ್ ಅನ್ನು emergency response service ಎಂದು ಪ್ರಾರಂಭ ಮಾಡಿದ್ದಾರೆ. ಇದನ್ನು ಆಂಧ್ರಪ್ರದೇಶದಲ್ಲಿ ಪ್ರಾರಂಭ ಮಾಡಿದರು, ಕರ್ನಾಟಕ ರಾಜ್ಯದಲ್ಲೂ ಸಹ ಪ್ರಾರಂಭ ಮಾರಿದರು ಮತ್ತು ರಾಜಸ್ಥಾನದಲ್ಲೂ ಸಹ ಪ್ರಾರಂಭ ಮಾಡಿದರು. ಅದರೆ ಇದನ್ನು ಪ್ರಾರಂಭ ಮಾಡಿದ್ದು ಯಾರು ಎಂದರೆ, Out look ಎಂದು ದೇಶದಲ್ಲಿ.

ಅಧ್ಯಕ್ಷರು : ಮಾನ್ಯ ರೋಷನ್‌ಬೇಗ್‌ರವರೆ, ತಾವು ನೇರವಾಗಿ ಪ್ರಶ್ನೆಯನ್ನು ಕೇಳಿ. ನೀವು ಈಗ ಉಪ ಪ್ರಶ್ನೆಯನ್ನು ಕೇಳಿ. ನೀವು ಬೇಕಾದರೆ debateನಲ್ಲಿ participate ಮಾಡುವಿರಂತೆ

ಶ್ರೀ ಆರ್.ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳುವಂಥಾದ್ದು ಏನೆಂದರೆ ಇವರು Board meetingನಲ್ಲಿ ಒಂದು resolution ಮಾಡುತ್ತಾರೆ. ಅದು ಏನೆಂದರೆ be in touch with the leader of the opposition and keep him in good humour ಎನ್ನುತ್ತಾರೆ. ರಾಜಸ್ಥಾನ ಸರ್ಕಾರದಿಂದ ಸುಮಾರು ಎರಡು ಕೋಟಿ ರೂಪಾಯಿಗಳು ಏನು sanction ಆಗಿತ್ತು. ಆ 2 ಕೋಟಿ ರೂಪಾಯಿಗಳನ್ನು divert ಮಾಡಿ ಹೈದರಬಾದ್ fundಗೆ ಕಳುಹಿಸಿದ್ದಾರೆ. ನಾನು ಪ್ರಶ್ನೆ ಕೇಳುವಂಥಾದ್ದು ಏನೆಂದರೆ ಇದರ ಬಗ್ಗೆ ಒಂದು ತನಿಖೆ ಮಾಡಿಸಬೇಕು. ಇವರು ಲಾಸ್ಟ್‌ನಲ್ಲಿ ಏನು ಹೇಳುತ್ತಾರೆಂದರೆ no political....

ಅಧ್ಯಕ್ಷರು : ಮಾನ್ಯ ರೋಷನ್‌ಬೇಗ್‌ರವರೆ, ತಾವು ಈ subject ಸಂಬಂಧಪಟ್ಟಹಾಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿ. ನೀವು ಅದರ ಬಗ್ಗೆ ಏನಾದರೂ ಅಪಾದನೆ ಮಾಡುವುದಿದ್ದರೆ ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಿ.

ಶ್ರೀ ಆರ್.ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ನಾನು ಅಪಾದನೆ ಮಾಡುತ್ತಿದ್ದೇನೆ.

ಅಧ್ಯಕ್ಷರು : ಈ subject ಸಂಬಂಧವಿಲ್ಲ, ನೀವು ಪ್ರಶ್ನೆ ಕೇಳಿ. ನೀವು ಈ ವಿಷಯವಾಗಿ ಪ್ರತ್ಯೇಕವಾಗಿ ಚರ್ಚೆ ಮಾಡಿ.

ಶ್ರೀ ಆರ್.ರೋಷನ್‌ಬೇಗ್ : ನಾನು ಈ ಬಗ್ಗೆ ತನಿಖೆ ಮಾಡಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಈಗ ಪ್ರಶ್ನೆ ಏನು ಇದೆ. ನೀವು ಇಲ್ಲಿ ಯಾವುದೋ ವಿಷಯವನ್ನು ತಂದು ಪ್ರಸ್ತಾಪ ಮಾಡುತ್ತಿದ್ದೀರಿ. ನೀವು ಮೊದಲು ನೊಟೀಸ್ ಕೊಡಿ. No, I will not allow you.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದರಲ್ಲಿ ಅವ್ಯವಹಾರವಾಗಿದೆಯೆಂದು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಯವರು ಇದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿ, ಆಗಿರುವ ಅವ್ಯವಹಾರ ಆಗಿರುವಂಥಾದ್ದನ್ನು ಸರಿಪಡಿಸುತ್ತೇವೆಂಬ ಮಾತನ್ನು ಹೇಳಿದರೆ ಅಯಿತಲ್ಲಾ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಲ್ಲಿ ಬಂದು ಅವ್ಯವಹಾರವಾಗಿದೆ, enquiry ಮಾಡಿಯೆಂದರೆ ನೀವು ಮೊದಲೇ ಮಾಹಿತಿಯನ್ನು ಕೊಡಬೇಕಲ್ಲಾ, ನೊಟೀಸ್ ಕೊಡಬೇಕಲ್ಲಾ, ಈಗ ಪ್ರಶ್ನೋತ್ತರ ಅವಧಿಯಲ್ಲಿ ಈ ರೀತಿ ಮಾಡಿದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಅವರು ಏನು ಈಗಲೇ ಉತ್ತರ ಕೊಡಿಯೆಂದು ಡಿಮಾಂಡ್ ಮಾಡುತ್ತಿಲ್ಲ. ಈ ರೀತಿ ಬಂದಿದೆ, ಇದು ನಿಮ್ಮ ಇಲಾಖೆಗೆ ಸಂಬಂಧಪಟ್ಟಿದ್ದು, ಇದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇವೆ .ಅದರ ಬಗ್ಗೆ enquiry ಮಾಡಿಯೆಂದು ಹೇಳುತ್ತಿದ್ದೇವೆ. ಅದನ್ನು enquiry ಮಾಡುವುದಕ್ಕೆ ಮಂತ್ರಿಗಳಿಗೆ ಕಷ್ಟ ಏನು ಇದೆ? ಮಾಡಲಿ ಬಿಡಿ.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರೆ, ಅವರು ಅದರ details ಎಲ್ಲವನ್ನು ಕೊಡದೇ.. ..

ಶ್ರೀ ಸಿದ್ದರಾಮಯ್ಯ : details ಇಲ್ಲ.

ಅಧ್ಯಕ್ಷರು : ಹಾಗಾದರೆ ಯಾವುದು ಅವ್ಯವಹಾರವಾಗಿದೆ? ಯಾರು ಅವ್ಯವಹಾರ ಮಾಡಿದ್ದಾರೆ? ಯಾರು ವ್ಯವಹಾರ ಮಾಡಿದ್ದಾರೆ? ಏನು agreement ಆಗಿದೆ? ಅವೆಲ್ಲಾ details ಅನ್ನು ಕೊಡಿ. ಸುಮ್ಮನೆ ಹಾಗೆ enquiry ಮಾಡಿ ಎಂದು ಬಿಟ್ಟರೆ ಹೇಗೆ?

ಶ್ರೀ ಸಿದ್ದರಾಮಯ್ಯ : ಆ ಡಿಟೈಲ್ಸ್ ಕೊಡಿ, ಎನ್‌ಕ್ವಾಯರಿ ಮಾಡಲಿ.

ಅಧ್ಯಕ್ಷರು : ನೀವು ಡಿಟೈಲ್ಸ್ ಕೊಡಿ, ಈಗ ಸಡನ್ ಆಗಿ ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಮಾಡುವುದು.

ಶ್ರೀ ಆರ್.ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ನೀವು ಈ ರೀತಿ irritate ಆಗಬಾರದು.

ಅಧ್ಯಕ್ಷರು : irritate ಪ್ರಶ್ನೆಯಲ್ಲ.

ಶ್ರೀ ಆರ್.ರೋಷನ್‌ಬೇಗ್ : ಇದು ಬಹಳ important subject.

ಅಧ್ಯಕ್ಷರು : ಇದರ ಬಗ್ಗೆ ಪ್ರತ್ಯೇಕವಾಗಿ ನೋಟೀಸ್ ಕೊಡಿ, ಅದರ ಬಗ್ಗೆ discussion ಮಾಡಿ

ಶ್ರೀ ಆರ್.ರೋಷನ್‌ಬೇಗ್ : ನಾವು ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ರಾಜಸ್ಥಾನದಲ್ಲಿ ಈ ರೀತಿಯಾಗಿದೆ. ಇಲ್ಲಿ ನೀವು ಹುಷಾರಾಗಿ ಇರಿಯೆಂದು ಹೇಳುತ್ತಿದ್ದೇವೆ.

ಅಧ್ಯಕ್ಷರು : ರಾಜಸ್ಥಾನದಲ್ಲಿ ಆಗಿದೆ, ಇಲ್ಲಿ ಆಗಿದೆಯೆಂಬುದಕ್ಕೆ decision ತೆಗೆದುಕೊಳ್ಳಬೇಕಲ್ಲಾ.

ಶ್ರೀ ಆರ್.ರೋಷನ್‌ಬೇಗ್ : ಆಗಿದೆ, ನಾನು ಅದನ್ನು ಓದಿ ಹೇಳುತ್ತೇನೆ, ಈಗ ಗೊತ್ತಾಗುತ್ತದೆ.

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೆ, ಪ್ರಶ್ನೆ ಕೇಳಿ.

ಶ್ರೀ ಬಿ.ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಮಾನ್ಯ ಬಾಲಕೃಷ್ಣರವರು ಕೇಳಿದ ಪ್ರಶ್ನೆಗೆ ಸಂಬಂಧಪಟ್ಟಂತೆ ನಾವು 517 ಆಂಬುಲೆನ್ಸ್ ಅನ್ನು 2010ನೇ ಮಾರ್ಚ್ ತಿಂಗಳಿಗೆ ಕೊಡುತ್ತೇವೆಂದು ಹೇಳಿದ್ದೇವೆ. ಈ ರಾಜ್ಯದಲ್ಲಿ ಎಲ್ಲಾ ಕಡೆಗಳಿಗೂ 517 ಆಂಬುಲೆನ್ಸ್ ಅನ್ನು 2009ನೇ ನವೆಂಬರ್ ತಿಂಗಳಿಗೆ ಸಂಪೂರ್ಣವಾಗಿ ತಲುಪುವಂತೆ ಒಬ್ಬ ಆರೋಗ್ಯ ಮಂತ್ರಿಯಾಗಿ ಮಾಡಿಕೊಡುತ್ತೇನೆ. ಇನ್ನು ಮಾನ್ಯ ರೋಷನ್‌ಬೇಗ್‌ರವರು ಕೇಳಿದಂಥ ಪ್ರಶ್ನೆಗೆ ಸಂಬಂಧಪಟ್ಟಂತೆ ಅವರು ನನ್ನ ಗಮನಕ್ಕೆ ಏನು ವಿಷಯವನ್ನು ತಂದಿದ್ದಾರೆ. ಅದರ ಬಗ್ಗೆ ನನಗೆ ಸೂಕ್ತವಾದಂಥ ಮಾಹಿತಿ ಇಲ್ಲ. ಅದರ ಬಗ್ಗೆ ನಾನು ಮಾತನಾಡಿ ಯಾವ ರೀತಿಯಲ್ಲಿ ತಮಗೆ ಸೂಕ್ತವಾದ ಉತ್ತರವನ್ನು ಕೊಡಬೇಕೊ ಅದನ್ನು ಕೊಡುತ್ತೇನೆ.

ಶ್ರೀ ಯು.ಟಿ.ಖಾದರ್ : ಮಾನ್ಯ ಸಚಿವರು ಆರೋಗ್ಯ ಕವಚ ಯೋಜನೆಯಡಿ ನಮ್ಮ ಕ್ಷೇತ್ರಕ್ಕೆ ಒಂದು ಆಂಬುಲೆನ್ಸ್ ಎನ್ನು ಕೊಟ್ಟಿದ್ದಾರೆ. ಅದರೆ ಸಮಸ್ಯೆ ಏನೆಂದರೆ, ಆ ವಾಹನದ ಚಾಲಕರು ಸ್ಥಳೀಯರಲ್ಲ, ಹೊರಗಿನವರು. ಯಾವ ಗ್ರಾಮ ಎಲ್ಲಿದೆ ಎಂದು ಅವರಿಗೆ ಗೊತ್ತಿರುವುದಿಲ್ಲ. ರೋಗಿಗಳನ್ನು 10–15 ನಿಮಿಷಗಳಲ್ಲಿ ಆಸ್ಪತ್ರೆಗೆ ಮುಟ್ಟಿಸಬೇಕಾಗಿರುವ ಕಾರಣ, ನನ್ನ ಕಳಕಳಿ ಏನೆಂಧರೆ, ಇಂಥ ಆಂಬುಲೆನ್ಸ್‌ಗಳಲ್ಲಿ ಸ್ಥಳೀಯರನ್ನು ವಾಹನ ಚಾಲಕರನ್ನಾಗಿ ಮಾಡಿದರೆ ಬಹಳಷ್ಟು ಪ್ರಯೋಜನವಾಗುತ್ತದೆ. ಏಕೆಂದರೆ ಅವರಿಗೆ ಹಳ್ಳಿಗಳು ಗೊತ್ತಿರುತ್ತವೆ. ಈ ಒಂದು ಕ್ರಮವನ್ನು ಮಾನ್ಯ ಸಚಿವರು ಮಾಡಬೇಕು ಎಂದು ನಾನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ.ನಾರಾಯಣಸ್ವಾಮಿ : ತಾಲ್ಲೂಕು ಲೆವೆಲ್‌ನಲ್ಲಿರತಕ್ಕಂಥ ಆಂಬುಲೆನ್ಸ್‌ಗೆ ನಾವು alternate ಕೊಡುತ್ತೇವೆ ಎನ್ನುವ ಮಾತನ್ನು ಮಾನ್ಯ ಆರೋಗ್ಯ ಸಚಿವರು ಹೇಳಿದರು. ಇಡೀ ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಆಂಬುಲೆನ್ಸ್‌ಗಳು ಕೆಟ್ಟು ಬಿದ್ದಿವೆ, ಡ್ರೈವರ್ಸ್ ಕೊರತೆ ಇದೆ ಎಂದು ಅವರು ಒಂದು ತನಿಖೆ ಮಾಡಲಿ. ಕೆಲವೊಮ್ಮೆ ಆಂಬುಲೆನ್ಸ್ ಇದ್ದರೂ, ಡೀಸೆಲ್ ಇಲ್ಲ ಎಂದು

ಹೇಳುತ್ತಾರೆ. ಯಾವ patient ಹೋಗುತ್ತಾರೋ, ಅವರು ದುಡ್ಡು ಕೊಟ್ಟರೆ ಮಾತ್ರ ಆಂಬುಲೆನ್ಸ್ ಕೆಲಸ ಮಾಡುತ್ತದೆ. ಅದರ ಬಗ್ಗೆಯೂ ತನಿಖೆ ಮಾಡಿ ಸೂಕ್ತ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಅಶೋಕ್ ಕಾಟ್ಟೆ : 108 ಆಂಬುಲೆನ್ಸ್‌ಗಳು, ತಾಲ್ಲೂಕು ಲೆವೆಲ್‌ನಲ್ಲಿ ಬರೀ 30 ಕಿ.ಮೀ. ಎಂದು ಆರೋಗ್ಯ ಸಚಿವರು ಹೇಳಿದರು. ತುಂಬ emergency ಇದ್ದಾಗ, at least district headquarters ವರೆಗೆ ಹೋಗಲು ಅನುಕೂಲ ಮಾಡಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ಬಿ.ಶ್ರೀರಾಮುಲು : 517 ಆಂಬುಲೆನ್ಸ್‌ಗಳು ಈ ರಾಜ್ಯಕ್ಕೆ ಬಂದ ನಂತರ ಎಲ್ಲರಿಗೂ ಅನುಕೂಲವಾಗುತ್ತದೆ. ಈಗ ಸದ್ಯಕ್ಕೆ 1,10,000 ಜನಸಂಖ್ಯೆಗೆ ಒಂದು ಆಂಬುಲೆನ್ಸ್ ಎಂದು ಮಾಡಿದ್ದೇವೆ. ಮುಂಬರುವಂಥ ದಿನಗಳಲ್ಲಿ 50,000 ಜನಸಂಖ್ಯೆಗೆ ಒಂದು ಎಂದು ಮಾಡಿದ ನಂತರ ಎಲ್ಲರಿಗೂ ಅನುಕೂಲವಾಗುತ್ತದೆ. ಸಾಕಷ್ಟು ಆಂಬುಲೆನ್ಸ್‌ಗಳು ಇನ್ನೂ ಬರಬೇಕಾಗಿದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನೀವು ಹೇಳುತ್ತಿರುವಂತೆ ಜನಸಂಖ್ಯೆ ಸರಿ ಇದೆ. ಆದರೆ ಈಗ ನಿಮ್ಮ ಆಂಬುಲೆನ್ಸ್‌ಗಳು ತಾಲ್ಲೂಕು headquaterಗಳಲ್ಲಿ ಹೋಗುತ್ತವೆ. ಅಕಸ್ಮಾತ್ ಸೀರಿಯಸ್ ಆದಾಗ, ಅಲ್ಲಿಂದ ಆಚೆಗೆ ಹೋಗಬೇಕು ಎಂದಾಗ, ತಾಲ್ಲೂಕು headquarterಗಳಲ್ಲಿ operate ಮಾಡುವವರು ಯಾರೂ ಇಲ್ಲ ಎನ್ನುವಂಥ ಪರಿಸ್ಥಿತಿ ಬಂದಾಗ, ಆಂಬುಲೆನ್ಸ್‌ನಲ್ಲಿ ಜಿಲ್ಲಾ headquarterಗೆ ಹೋಗಲು ಅವಕಾಶ ಮಾಡಿಕೊಡಿ ಎಂದು ಅವರು ಪ್ರಶ್ನೆ ಕೇಳುತ್ತಿದ್ದಾರೆ.

ಶ್ರೀ ಅಶೋಕ್ ಕಾಟ್ಟೆ : Emergencyಗೆ ಮಾತ್ರ ಎಂದು ಕೇಳುತ್ತಿದ್ದೇವೆ.

ಶ್ರೀ ಬಿ.ಶ್ರೀರಾಮುಲು : ಈಗ ಸದ್ಯಕ್ಕೆ 208 ಆಂಬುಲೆನ್ಸ್‌ಗಳು ನಡೆಯುತ್ತಿವೆ. 517 ಆಂಬುಲೆನ್ಸ್‌ಗಳು ಬಂದರೆ ಎಲ್ಲ ತಾಲ್ಲೂಕು headquarter ಆಸ್ಪತ್ರೆಗಳಿಗೆ ಹೋಗಲು ಅನುಕೂಲವಾಗುತ್ತದೆ. ನವೆಂಬರ್ ಒಳಗೆ ಈ 517 ಆಂಬುಲೆನ್ಸ್‌ಗಳನ್ನು ಎಲ್ಲರಿಗೂ ಕೊಡುತ್ತೇವೆ.

ಶ್ರೀ ಅಶೋಕ್ ಕಾಟ್ಟೆ : ನಾವು ಮಾನ್ಯ ಆರೋಗ್ಯ ಸಚಿವರಿಗೆ ಕೇಳುವುದೇನೆಂದರೆ, ಬಹಳ emergency ಇದ್ದಾಗ district headquarterಗಳಿಗೆ ಕಳುಹಿಸಿಕೊಡಲು ಅಧಿಕಾರಿಗಳಿಗೆ permissions ಕೊಡುವಿರಾ ಎಂದು ಕೇಳುತ್ತಿದ್ದೇವೆ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ಆರೋಗ್ಯ ಕವಚ ಎನ್ನುವುದು ಒಳ್ಳೆಯ ಕಾರ್ಯಕ್ರಮ. ಬೇರೆಬೇರೆ ರಾಜ್ಯಗಳಲ್ಲೂ ಇಂಥ ಯೋಜನೆಗಳಿವೆ. Well equipped ambulance, highly technically sophisticated ambulance ಅನ್ನು ತುರ್ತು ಚಿಕಿತ್ಸೆಗೆ ಅಂದರೆ for a distress

management ಗಾಗಿ ಇಡಲಾಗುತ್ತದೆ. ಹಾವು ಕಡಿಯಿತು, ಚೇಳು ಕಡಿಯಿತು ಇಂಥ purposeಗಳಿಗೆ ಆಂಬುಲೆನ್ಸ್ ಅನ್ನು ಇಡುವಂಥಾದ್ದಲ್ಲ. Trauma, head injury, road accidents, heart attack, any haemorrhage ಈ ರೀತಿಯ ಅತ್ಯಂತ ಕಠಿಣ ಆರೋಗ್ಯ ಸಮಸ್ಯೆಗಳನ್ನು ನಿವಾರಣೆ ಮಾಡಲಿಕ್ಕೆ ಇರತಕ್ಕಂಥ ಒಂದು ಯೋಜನೆ ಇದು. ಆರೋಗ್ಯ ಇಲಾಖೆ ಒಂದು ಪ್ರಮುಖವಾದಂಥ ಖಾತೆಯಾಗಿದೆ. ಶ್ರೀರಾಮುಲುರವರು ಒಂದು ವರ್ಷಕ್ಕಿಂತ ಹೆಚ್ಚು ಕಾಲದಿಂದ ಆರೋಗ್ಯ ಸಚಿವರಾಗಿದ್ದಾರೆ.

ಅಧ್ಯಕ್ಷರು : ಮಹದೇವಪ್ಪನವರೇ, ಇದು ಪ್ರಶ್ನೋತ್ತರ ಕಾಲ. ನೇರವಾಗಿ ಪ್ರಶ್ನೆ ಕೇಳಿ.

ಡಾ: ಹೆಚ್.ಸಿ.ಮಹದೇವಪ್ಪ : ನಾನು ಅವರಿಗೆ ಮುಜುಗರ ಮಾಡುವುದಿಲ್ಲ. ಆ ಕಡೆ ಡಾ: ಆಚಾರ್‌ರವರು ಇದ್ದಾರೆ, ಡಾ: ಬಗಲಿಯವರು ಇದ್ದಾರೆ. ಈ ಇಲಾಖೆಯನ್ನು ಮಾಡುವಾಗ ಸಚಿವರು ಅವರ ಸಲಹೆಯನ್ನು ಪಡೆದುಕೊಳ್ಳಬೇಕು. ಈಗ ಸುಮಾರು 1,200 ಜನ ವೈದ್ಯರ ಹುದ್ದೆಗಳು ಖಾಲಿ ಇವೆ, 15,000 ಕ್ಕೂ ಹೆಚ್ಚು ಅರೆ ವೈದ್ಯ ಸಿಬ್ಬಂದಿಗಳ ಕೊರತೆ ಇದೆ. ಹೋಗಿರುವಾಗ, ಸಿಬ್ಬಂದಿಗಳಿಲ್ಲದೇ, ಏನೂ ಸೇವೆಯೇ ಇಲ್ಲದೇ, ಈ ಎಲ್ಲ instrumentಗಳನ್ನು ತೆಗೆದುಕೊಂಡು ಬಂದರೆ ಕೆಲಸ ಮಾಡುವುದು ಹೇಗೆ? ಅವರು ಏನು ಮಾಡಬೇಕು ಎಂದರೆ, ಮೊದಲು ಸಿಬ್ಬಂದಿಗಳ ಕೊರತೆಯನ್ನು ತುಂಬದೇ ಕೇವಲ ವೆಹಿಕಲ್‌ಗಳನ್ನು ತೆಗೆದುಕೊಂಡು ಬಂದು ನಿಲ್ಲಿಸಿಕೊಂಡರೆ ಏನು ಪ್ರಯೋಜನ? ಅದಕ್ಕಾಗಿ, ದಯವಿಟ್ಟು ನಾನು ಮಂತ್ರಿಗಳಿಗೆ ಏನು ಹೇಳುತ್ತೇನೆ ಎಂದರೆ, ಅವರು ಮೀಟಿಂಗ್ ಮಾಡಬೇಕು, ರಿವ್ಯೂ ಮಾಡಬೇಕು, ಜಿಲ್ಲೆಗಳಿಗೆ ಹೋಗಬೇಕು. ಅದನ್ನು ಮಾಡಿದರೆ effective ಆಗಿ ಕೆಲಸ ಮಾಡಬಹುದು. ಇಲ್ಲಿ ನಾವು ಅವರಿಗೆ ಮುಜುಗರ ಮಾಡುವುದಕ್ಕೆ ಹೋಗುತ್ತಿಲ್ಲ. ಅಲ್ಲಿ ನಮಗೆ ಏನು ಅಂಕಿಅಂಶಗಳನ್ನು ಕೊಟ್ಟಿದ್ದಾರೆ, ಅದು ಬರೀ ತಪ್ಪುತಪ್ಪು ಕೊಟ್ಟಿರುತ್ತಾರೆ. ಅದರಿಂದ ನಿಮಗೇ ಮುಜುಗರವಾಗುತ್ತದೆ. ನೀವು ಅಧಿಕಾರಿಗಳೊಂದಿಗೆ ಚರ್ಚೆ ಮಾಡದೇ ಹೋದರೆ, ground reality ನಿಮಗೆ ಗೊತ್ತಾಗಬೇಕು ಎಂದರೆ ನೀವು ರಿವ್ಯೂ ಮಾಡಬೇಕು. ನೀವು ಅದನ್ನು ಮಾಡಿ, ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದಾಗ ತಪ್ಪುಗಳನ್ನು ಸರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ಅದನ್ನು ಮಾಡಿ. ನಿಮ್ಮ ಬಗ್ಗೆ ನಾವು ಆಕ್ಷೇಪಣೆಯನ್ನೇನು ಮಾಡುತ್ತಿಲ್ಲ. ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎನ್ನುವುದೇ ನಮ್ಮ ಉದ್ದೇಶ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಮಾನ್ಯ ಮಹದೇವಪ್ಪನವರು ಕೇಳಿದಂಥ ಪ್ರಶ್ನೆಗೆ, ರಾಜ್ಯದಲ್ಲಿ 1,288 ಡಾಕ್ಟರ್‌ಗಳ ಕೊರತೆ ಇದೆ, Specialistಗಳ ಸುಮಾರು 970 ಹುದ್ದೆಗಳು ವೇಕೆಂಟ್ ಇವೆ. ಇಲ್ಲ ಸೇರಿ ಸುಮಾರು 17,000

ಪೀಸ್ಟ್‌ಗಳು ವೇಕೆಂಟ್ ಇವೆ. ಅಧಿಕಾರಿಗಳ ಜೊತೆ ಸಭೆ ನಡೆಸಬೇಕು, ಅವರಿಂದ ಮಾಹಿತಿ ತೆಗೆದುಕೊಳ್ಳಬೇಕು ಎಂದು ತಾವು ಏನು ಸಲಹೆ ಕೊಟ್ಟಿದ್ದೀರಿ, ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ. ಬಹಳಷ್ಟು ಪೋಸ್ಟ್‌ಗಳು ವೇಕೆಂಟ್ ಇದ್ದ ಕಾರಣ, ತಮಗೆ ಗೊತ್ತಿರುವ ಹಾಗೆ ಇತ್ತೀಚೆಗೆ 815 ಜನ ಡಾಕ್ಟರ್‌ಗಳನ್ನು ತೆಗೆದುಕೊಂಡರೂ, ಅವರ ಪೈಕಿ 615 ಮಂದಿ ಡಾಕ್ಟರ್‌ಗಳು ಮಾತ್ರ ಬಂದು ಕೆಲಸಕ್ಕೆ join ಆಗಿದ್ದಾರೆ, ಕೆಲವರು join ಆಗಿಲ್ಲ. 5,300 paramedical postಗಳನ್ನು ಇನ್ನು ಎರಡು ತಿಂಗಳಲ್ಲಿ ಭರ್ತಿ ಮಾಡುತ್ತೇವೆ. ಇನ್ನು ಯಾವ ರೀತಿಯಲ್ಲಿ ತಾವು ಸಲಹೆಗಳನ್ನು ಕೊಡುತ್ತೀರೋ, ಅವುಗಳನ್ನು ನಾನು ಸಂಪೂರ್ಣವಾಗಿ ತೆಗೆದುಕೊಂಡು, ತಮಗೆ ಸಮಾಧಾನ ಮತ್ತು ತೃಪ್ತಿ ತರುವಂಥ ಕೆಲಸವನ್ನು ನಾನು ಮಾಡಿಕೊಡುತ್ತೇನೆ.

ಶ್ರೀ ಎಂ.ಮಂಜು : Contract basis appointmentಅನ್ನು ತಾವು ನಿಲ್ಲಿಸಿದ್ದೀರಿ. ದಯವಿಟ್ಟು contract basis ಮೇಲೆ appointment ಮಾಡಿಕೊಳ್ಳಬೇಕು.

ಶ್ರೀ ಅಶೋಕ್ ಕಾಟ್ಟೆ : ದಯವಿಟ್ಟು ಡಾಕ್ಟರ್‌ಗಳ ಸಂಬಳವನ್ನಾದರೂ ಜಾಸ್ತಿ ಮಾಡಿ. ಇಲ್ಲದಿದ್ದರೆ ಡಾಕ್ಟರ್‌ಗಳ್ಯಾರೂ ಸರ್ಕಾರಿ ಆಸ್ಪತ್ರೆಗಳಿಗೆ ಬರುವುದಿಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಹೀಗೆ ಕೇಳುತ್ತಾ ಹೋದರೆ ಆರೋಗ್ಯ ಇಲಾಖೆಯ ಬಗ್ಗೆಯೇ ಚರ್ಚೆ ಪ್ರಾರಂಭವಾಗುತ್ತದೆ. ಬಜೆಟ್ ಮೇಲೆ ಚರ್ಚೆ ಮಾಡುವಾಗ, ಆರೋಗ್ಯ ಇಲಾಖೆಯ ವಿಷಯ ಬಂದಾಗ ಆಗ ಚರ್ಚೆ ಮಾಡಿ. ಆರೋಗ್ಯ ಕವಚ ಯೋಜನೆ ಹೋಗಿ, ಈಗ ಪೂರ್ತಿ ಆರೋಗ್ಯ ಇಲಾಖೆಯ ಬಗ್ಗೆಯೇ ಚರ್ಚೆ ಚಾಲೂ ಆಯಿತು. ಈಗ ಮುಂದಿನ ಪ್ರಶ್ನೆ, ಕೃಷ್ಣಪ್ಪನವರು ಪ್ರಶ್ನೆ ಕೇಳಬೇಕು.

ಕರ್ನಾಟಕ ವಿಧಾನ ಸಭೆ

7(32) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ)

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ತುಮಕೂರು ಜಿಲ್ಲೆ ತುರುವೇಕೆರೆ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಅನುದಾನವನ್ನು ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಿಡುಗಡೆ ಮಾಡಲಾದ ಅನುದಾನ ಎಷ್ಟು?

ಹೌದು.

ಪ್ರಸಕ್ತ ಸಾಲಿನಲ್ಲಿ ರೂ.16.49 ಲಕ್ಷಗಳ ಅನುದಾನ ಒದಗಿಸಲಾಗಿದೆ. ಇದುವರೆವಿಗೂ ಈ ಕಾಮಗಾರಿಗೆ ರೂ.95.73 ಲಕ್ಷಗಳು ವೆಚ್ಚವಾಗಿದೆ.

ಆ. ಆಸ್ಪತ್ರೆ ಕಟ್ಟಡದ ಕಾಮಗಾರಿಯನ್ನು ಕೈಗೊಂಡ ಗುತ್ತಿಗೆದಾರರ ಹೆಸರು ಮತ್ತು ವಿಳಾಸವನ್ನು ನೀಡುವುದು.